

# ಕನ್ನಡಿ ಮತ್ತು ನೀರು

ಹಳೆ ಕನ್ನಡಿಯ ಕುರಿತು ನಾನು
ಹಿಂದೆ ಬರೆದ ಕವಿತೆಗೆ
ಈಗ ವಯಸ್ಸಾಗಿದೆ

ಕುರುಡ ಗಾಯಕನೊಬ್ಬ
ಒಡೆದ ಕನ್ನಡಿಯ ಚೂರೊಂದನ್ನು
ತನ್ನ ತಂತಿವಾದ್ಯಕ್ಕೆ ಅಂಟಿಸಿಕೊಂಡ,
ಅವನು ಸತ್ತು ಅನೇಕ ವರ್ಷಗಳಾಗಿವೆ,
ಕನ್ನಡಿಯ ಚೂರು ಇನ್ನೂ ಜೀವಂತವಾಗಿದೆ.

ಅಂತಹ ಕನ್ನಡಿ ಚೂರುಗಳು
ಸುಂದರ ಕೈಚೀಲಗಳ ಒಳಗೂ ಬೆಚ್ಚಗೆ ಕುಳಿತಿರುತ್ತವೆ,
ಅಂತಹ ಕನ್ನಡಿಗಳ ಒಡತಿಯರೆಲ್ಲರೂ
ಆ ಕೈಚೀಲಗಳಷ್ಟು ಸುಂದರವಾಗಿರುವುದಿಲ್ಲ.

ಪ್ರತಿ ಬಾರಿ ಆ ಕುರುಡ ಹಾಡಿದಾಗ
ಅವನ ಮುಖ ಆ ಚೂರು ಕನ್ನಡಿಯಲ್ಲಿ ಹೊಳೆಯುತ್ತಿತ್ತು,
ದುರದೃಷ್ಟಶಾಲಿ ಅವನು
ಅವನ ಮುಖ ಅವನಿಗೇ ಕಾಣಿಸುತ್ತಿರಲಿಲ್ಲ. ಆದರೆ
ಕೈಚೀಲಗಳ ಒಡತಿಯರಾದ ಹೆಂಗಸರು
ಆಕರ್ಷಕವಾಗಿ ಕಾಣಿಸುತ್ತಿದ್ದೇವೆಂದು ಖಾತರಿಪಡಿಸಿಕೊಳ್ಳಲು
ಚೀಲದೊಳಗಿನ ಕನ್ನಡಿಗಳಲ್ಲಿ ತಮ್ಮದೇ ಮುಖವ
ತಪಾಸಣೆ ಮಾಡಿಕೊಳ್ಳುತ್ತಿದ್ದರು.

ನೀರಕನ್ನಡಿಯಲ್ಲಿ ಮುಖವ ನೋಡಿಕೊಳ್ಳುತ್ತಿದ್ದ ದಿನದಿಂದ
ಕೈಚೀಲದೊಳಗೆ ಚೂರು ಕನ್ನಡಿಯ ಒಯ್ಯುವ ದಿನದವರೆಗೆ,
ತನ್ನ ತಾನೇ–ದಿಟ್ಟಿಸುವ ಪರಿಪಾಠ
ಮುಂದುವರಿದಿದೆ.

